ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **89/2025**

ಸಿ ಡಬ್ಲ್ಯೂಃ– **10**/ಪಿ ಡಬ್ಲ್ಯೂ ಃ**-10**

ಸಾಕ್ಷಿದಾರರ ಹೆಸರು ಃ ರುದ್ರೇಶ್
ತಂದೆಯ ಹೆಸರು ಃ ನಿಂಗಪ್ಪ
ವಯಸ್ಸು ಃ 46 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಮಾವಿನಕೆರೆ ಭದ್ರಾವತಿ ತಾಲೂಕು

ದಿನಾಂಕಃ **23-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.
ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಸೇರಿದ ವಾಹನ ಸಂಖ್ಯೆ KA 14 C 7379 ಬೊಲೆರೋ ಪಿಕ್ ಅಪ್ ವಾಹನ ಇದ್ದು ಅದನ್ನು ಪೋಲಿಸರು ಯಾವ ಕಾರಣಕ್ಕಾಗಿ ಅಮಾನತು ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಕೆಲವು ದಾಖಲೆಗೆ ಸಹಿ ಪಡೆದಿದ್ದು ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಗೊತ್ತಿರುವುದಿಲ್ಲ.
2. ಸಾಕ್ಷಿ ಅಮಾನತು ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಅಮಾನತು ಮಹಜರ್ ಅನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ತಮ್ಮ ವಾಹನದ ಒಂದು ಭಾವಚಿತ್ರ ನೋಡಿ ಗುರುತಿಸಿದ್ದು ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಎರಡು ದಾಖಲೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ನಿಪಿ-16 ಮತ್ತು ನಿಪಿ-17 ಎಂದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಮತ್ತು ನಿಪಿ-17(ಎ) ಎಂದು ಗುರುತಿಸಲಾಯಿತು. ನಿಪಿ- 16 ಮತ್ತು ನಿಪಿ-17 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

   (ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸಹಾಯಕ ಸರ್ಕಾರಿ ಅಭಿಯೋಜಕರು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 18.07.2025 ರಂದು ಎನ್ ಆರ್ ಪುರ ಪೋಲಿಸ್ ಠಾಣೆಯವರು ಕಲಂ 133 ಮೋಟಾರ್ ವಾಹನ ಕಾಯ್ದೆ ಯಡಿ ನನ್ನ ವಾಹನ ಸಂಖ್ಯೆ KA 14 C 7379 ವಾಹನವನ್ನು ದಿಃ 22.06.2025 ರಂದು ಯಾರು ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಮತ್ತು ಸದರಿಯವರ ಚಾಲನಾ ಪತ್ರ ಮತ್ತು ವಾಹನದ ದಾಖಲೆಗಳನ್ನು ತಂದು ಹಾಜರುಪಡಿಸುವಂತೆ ನಿಪಿ-16 ರಂತೆ ನೋಟಿಸು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನಾನು ಆ ದಿನ ಸದರಿ ವಾಹನವನ್ನು ನನ್ನ ಮಗ ಸಂದೀಪ ಈತನು ಚಾಲನೆ ಮಾಡಿಕೊಂಡು ಹೋಗುತ್ತಿದ್ದು ಹಾಗೂ ಆ ವಾಹನದ ಚಾಲನಾ ಪರವಾನಿಗೆ ಪತ್ರ ಮತ್ತು ಆರ್.ಸಿ. ಬುಕ್ ಅನ್ನು ತಂದು ಹಾಜರುಪಡಿಸುವುದಾಗಿ ನಿಪಿ-17 ರಂತೆ ಪ್ರತ್ಯುತ್ತರ ನೋಟಿಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.
2. ದಿಃ 21.07.2025 ರಂದು ನಾನು ತಂದು ಠಾಣೆಗೆ ಹಾಜರುಪಡಿಸಿದ ವಾಹನ ಸಂಖ್ಯೆ KA 14 C 7379 ವಾಹನವನ್ನು ಚಾಸಾ-5 ರವರ ಸಮಕ್ಷಮ ಪೋಲಿಸರು ಅಮಾನತು ಮಹಜರ್ ಅನ್ನು ಮಾಡಿ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಆದೇಶದ ಮೇರೆಗೆ ಸದರಿ ವಾಹನವನ್ನು Indemnity Bond ಮೇಲೆ ಬಿಡುಗಡೆ ಗೊಳಿಸಿಕೊಂಡಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ೦ಃ ಇಲ್ಲ ೦ಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ